ಡಾ. ರವಿ ಕುಮಾರ ಸುರಪುರ., ಭಾ.ಆ.ಸೇ.
ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ
**Dr. Ravi Kumar Surpur.,** I.A.S.
Commissioner
Social Welfare Department

ಕರ್ನಾಟಕ ಸರ್ಕಾರ
Government of Karnataka

5ನೇ ಮಹಡಿ, ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು-560 001
5th Floor, M.S. Building
Dr. B.R. Ambedkar Veedhi
Bengaluru-560001
Off : 080-22253783, Fax: 080-22353757
E-mail : comr.sw@gmail.com

ಸಂಖ್ಯೆ:ಸಕಇ/ಪಮೂತಕೇ/ಎಸ್-6/ಸಿಆರ್-10/ಪ್ರಬುದ್ಧ/2021-22 ದಿನಾಂಕ: 27.08.2021

ಮಾನ್ಯರೇ,

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನು ಒದಗಿಸುವ ಉದ್ದೇಶದಿಂದ ಪ್ರಬುದ್ಧ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

QS & US News Global Rank-200 ರಲ್ಲಿ ಸ್ಥಾನ ಪಡೆದ ವಿಶ್ವ ವಿದ್ಯಾಲಯದಿಂದ Offer letter ಪಡೆದ ಅಥವಾ ಇಲಾಖೆ ಪ್ರಕಟಿಸಿದ ವಿಶ್ವ ವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪಿ.ಹೆಚ್.ಡಿ.ಅಧ್ಯಯನ ಮಾಡಲು ಬಯಸುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

ವಾರ್ಷಿಕ ಕೌಟುಂಬಿಕ ಆದಾಯರೂ. 8.00 ಲಕ್ಷ ಒಳಗಿರುವ ಅಭ್ಯರ್ಥಿಗಳ ಪೂರ್ಣ ಬೋಧನ ಶುಲ್ಕ, ವಾರ್ಷಿಕ 8.00 ಲಕ್ಷ ನಿರ್ವಹಣಾ ವೆಚ್ಚ, ವಾಸ್ತವಿಕ ವೀಸಾ ಶುಲ್ಕ, ವಿಮಾ ಶುಲ್ಕ ಹಾಗೂ ಪ್ರಯಾಣ ವೆಚ್ಚ ಪಾವತಿಸಲಾಗುತ್ತದೆ. ರೂ. 8.00 ರಿಂದ 15.00 ಲಕ್ಷ ಆದಾಯ ಮಿತಿಯಲ್ಲಿರುವ ಅಭ್ಯರ್ಥಿಗಳಿಗೆ ಎಲ್ಲಾ ವೆಚ್ಚದ ಶೇ. 50% ರಷ್ಟು ವೆಚ್ಚ ಪಾವತಿಸಲಾಗುವುದು. ರೂ. 15.00 ರಿಂದ 25.00 ಲಕ್ಷ ಆದಾಯ ಮಿತಿಯಲ್ಲಿರುವ ಅಭ್ಯರ್ಥಿಗಳಿಗೆ ಶೇ. 33% ರಷ್ಟು ಧನಸಹಾಯ ಒದಗಿಸಲಾಗುತ್ತದೆ.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರತಿ ವರ್ಷ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ವಿದೇಶಿ ಉನ್ನತ ವ್ಯಾಸಂಗಕ್ಕೆ ಕಳುಹಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಬುದ್ಧ ಯೋಜನೆಯಡಿ 2021-22 ನೇ ಸಾಲಿನ ಅರ್ಜಿಯನ್ನು ದಿನಾಂಕ: 24.08.2021 ರಿಂದ ಆಹ್ವಾನಿಸಲಾಗಿದ್ದು ದಿನಾಂಕ: ~~07~~ 24.09.2021 ರಂದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ www.sw.kar.nic.in ಗೆ ಸಂಪರ್ಕಿಸಬಹುದಾಗಿದೆ.

KE)

ಈ ಮೇಲ್ಕಂಡ ಮಾಹಿತಿಯನ್ನು ತಮ್ಮ ವಿಶ್ವ ವಿದ್ಯಾಲಯದ ವ್ಯಾಪ್ತಿಯ ಅಡಿಯಲ್ಲಿ ಬರುವ ಎಲ್ಲಾ ಕಾಲೇಜುಗಳ ಮೂಲಕ ಪ್ರಸ್ತುತ ಅಧ್ಯಯನ ನಿರತರಾದ ವಿದ್ಯಾರ್ಥಿಗಳಿಗೆ ಹಾಗೂ ಈಗಾಗಲೇ ಪದವಿ ಹಾಗೂ ಸ್ನಾತಕೋತ್ತರ ಪದವಿ ಪೂರೈಸಿದ ವಿದ್ಯಾರ್ಥಿಗಳ ಗಮನಕ್ಕೆ ತರಲು ಮತ್ತು ಹೆಚ್ಚು ಪ್ರಚಾರ ಮಾಡಲು ಕೋರಿದೆ.

NB)

ಗೌರವಗಳೊಂದಿಗೆ,

SC/ST cell

30/8

(ಡಾ. ರವಿ ಕುಮಾರ್ ಸುರಪುರ)

ಗೆ,

ಪ್ರೊ. ಜೋಗನ್ ಶಂಕರ್
ಮಾನ್ಯ ಉಪ ಕುಲಪತಿಗಳು,
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ,
ಶಿವಮೊಗ್ಗ ಜಿಲ್ಲೆ 577 451.

Vice-Chancellor's
Personal Sect.
To No. 301
Date 15/9/2021

16/9/21